ಕರ್ನಾಟಕ ಸರ್ಕಾರ

**ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**

**ಮಡಿಕೇರಿ, ಕೊಡಗು ಜಿಲ್ಲೆ.**

**Phone: 08272 298220 Website: www.kimskodagu.kar.nic.in E-mail: directormckodagu@gmail.com**

**ಸಂ/ ಕೊ.ವೈ.ವಿ.ಸಂ/ಸರಬ/2017-18** **ದಿನಾಂಕ: 19.10.2017**

/634

## ನಿರುಪಯುಕ್ತ ವಸ್ತುಗಳ ವಿಲೇವಾರಿ ಟೆಂಡರ್ ಅಧಿಸೂಚನೆ

ವಿಷಯ:- ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥ, ಮಡಿಕೇರಿ ಇಲ್ಲಿನ ಬೋಧಕ ಆಸ್ಪತ್ರೆಯಲ್ಲಿರುವ ಹಳೆಯ ಅನುಪಯುಕ್ತ ವಸ್ತುಗಳ ವಿಲೇವಾರಿ ಸಂಬಂಧ ಅಧಿಸೂಚನೆ ಹೊರಡಿಸಿರುವ ಬಗ್ಗೆ.

* * *

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ, ಮಡಿಕೇರಿ ಇಲ್ಲಿನ ಭೋದಕ ಆಸ್ಪತ್ರೆಯ ಆವರಣದಲ್ಲಿರುವ ವಿವಿಧ ವಿಭಾಗಗಳಲ್ಲಿ ಹಳೆಯ ಅನುಪಯುಕ್ತಗೊಳಿಸಿದ ಉಪಯೋಗಕ್ಕೆ ಬಾರದ ಕಬ್ಬಿಣದ ಸಾಮಾನುಗಳು, ಪಿಠೋಪಕರಣ, ತುಕ್ಕು ಹಿಡಿದ ಮಂಚ, ಇತರೆಗಳು ಉಪಕರಣಗಳ ವಸ್ತುಗಳನ್ನು ವಿಲೇಮಾಡಿ ಸಂಗ್ರಹಿಸಿಡಲಾಗಿದೆ. ಈ ಸಾಮಗ್ರಿಗಳನ್ನು ಹಾಲಿ ಇರುವ ಸ್ಥಳದಿಂದ ಯಥಾಸ್ಥಿತಿಯಲ್ಲಿ ಸ್ವಯಂ ಸಂಗ್ರಹಣೆ ಮಾಡಿಕೊಂಡು ಸಾಗಾಣಿಕೆ ಮಾಡಿಕೊಳ್ಳುವ ನಿಬಂಧನೆ ಮೇರೆಗೆ ನಿಗಧಿತ ನಮೂನೆಯನ್ನು **ದಿನಾಂಕ 23.10.2017ರ ಪೂರ್ವಾಹ್ನ 10.00 ಗಂಟೆಯಿಂದ 14.11.2017ರ ಸಂಜೆ 4.00 ಗಂಟೆಯವರಗೆ** ಆಸ್ಪತ್ರೆಯ ಕಛೇರಿಯ ನಗದು ವಿಭಾಗದಲ್ಲಿ ಅರ್ಜಿ ನಮೂನೆ ಬೆಲೆ ರೂ. 1000/- (ರೂ. ಒಂದು ಸಾವಿರ ಮಾತ್ರ) ಗಳನ್ನು ಪಾವತಿಸಿ ಪಡೆಯಬಹುದಾಗಿದೆ. ಗರಿಷ್ಟ ದರಗಳ ಪಟ್ಟಿಯನ್ನು ಮತ್ತು ರೂ. 25,000-00 (ರೂ. ಇಪ್ಪತ್ತೈದು ಸಾವಿರ ಮಾತ್ರ)ಗಳ ಡಿ.ಡಿ/ಪೇ ಆರ್ಡರ್‌ನ್ನು ನಿರ್ದೇಶಕರು ಮತ್ತು ಡೀನ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥ, ಮಡಿಕೇರಿ. ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಲಗತ್ತಿಸಿ **ದಿನಾಂಕ 15.11.2017 ರಂದು ಪೂರ್ವಾಹ್ನ 11.00** ಗಂಟೆಯೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ ನಿರ್ದೇಶಕರು ಮತ್ತು ಡೀನ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥ, ಮಡಿಕೇರಿ. ಇವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಸ್ವೀಕೃತವಾದ ಸೀಲಾದ ದರ ಲಕೋಟೆಗಳನ್ನು ಸಲ್ಲಿಸಿರುವ, ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಮೊದಲು ಹರಾಜು ಪ್ರಕ್ರಿಯೆಯನ್ನು ನಡೆಸಿ ನಂತರ ಸೀಲಾದ ದರ ಲಕೋಟೆಗಳನ್ನು ಟೆಂಡರ್‌ದಾರರ ಸಮ್ಮುಖದಲ್ಲಿಯೇ ತೆರೆಯಲಾಗುವುದು. ಗರಿಷ್ಟ ದರ / ಮೊಬಲಗನ್ನು ಸೂಚಿಸಿದ ಬಿಡ್‌ದಾರರಿಗೆ ಸರ್ಕಾರಿ ನಿಯಮಾವಳಿ ಪ್ರಕಾರ ವಿಲೇವಾರಿ ಮಾಡಲಾಗುವುದು. ಅರ್ಹ ಬಿಡ್‌ದಾರರು ಸೂಚಿಸಿದ ಪೂರ್ಣ ಮೊಬಲಗನ್ನು ತೆರಿಗೆ ಸಹಿತ ಒಂದೇ ಇಡುಗಂಟಿನಲ್ಲಿ ಕಛೇರಿ ನಗದು ವಿಭಾಗಕ್ಕೆ ಪಾವತಿಸಿ, ಸರ್ಕಾರಿ ರಶೀದಿ ಪಡೆಯುವುದು. ಹಾಗೂ ಅನುಪಯುಕ್ತ ವಸ್ತುಗಳನ್ನು ಸ್ವಂತ ವಾಹನದಲ್ಲಿ ಸಾಗಿಸಿಕೊಳ್ಳುವ ನಿಬಂಧನೆಗೆ ಒಳಪಟ್ಟಿರುತ್ತದೆ. ಅರ್ಹ ಬಿಡ್‌ದಾರರು ಒಂದು ಇಡುಗಂಟಿನಲ್ಲಿ ನಿಗಧಿಪಡಿಸಿಧ ಸಮಯದಲ್ಲಿ ಪಾವತಿಸಲು ವಿಫಲರಾದಲ್ಲಿ ಅವರು ಸಲ್ಲಿಸಿರುವ ರೂ. 25,000-00 (ರೂ. ಇಪ್ಪತ್ತೈದು ಸಾವಿರ ಮಾತ್ರ) ಗಳ ಮುಂಗಡ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಈ ಎಲ್ಲಾ ನಿಬಂಧನೆಗೆ ಒಪ್ಪಿಗೆ ಇದ್ದಲ್ಲಿ ಮಾತ್ರ ದರಪಟ್ಟಿಯನ್ನು ಸಲ್ಲಿಸತಕ್ಕದ್ದು.

| | | |
|---|---|---|
| 1 | **ಟೆಂಡರ್ ಫಾರಂಗಳನ್ನು ಪಡೆಯಲು ನಿಗಧಿ ಪಡಿಸಿದ ದಿನಾಂಕ ಹಾಗೂ ಸಮಯ** | **ದಿ: 23.10.2017 ರಿಂದ 14.11.2017, ಸಮಯ ಪೂರ್ವಾಹ್ನ 10.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ (ರಜಾ ದಿನಗಳನ್ನು ಹೊರತುಪಡಿಸಿ)** |
| 2 | **ಮೊಹರಾದ ಟೆಂಡರ್ ಲಕೋಟೆಯನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ** | **ದಿ: 15.11.20107 ಪೂರ್ವಾಹ್ನ 11.00 ಗಂಟೆಗೆ** |

| | | |
|---|---|---|
| 3 | ಟೆಂಡರ್ ತೆರೆಯುವ ಕಂ ಬಹಿರಂಗ ಹರಾಜು ನಡೆಸುವ ಸ್ಥಳ ಮತ್ತು ವೇಳೆ | ನಿರ್ದೇಶಕರು ಮತ್ತು ಡೀನ್, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ದಿ: 15.11.2017 ಸಮಯ ಪೂರ್ವಾಹ್ನ 11.30 ಗಂಟೆ |
| 4 | ಟೆಂಡರ್ ಸ್ವೀಕರಿಸುವ ಪ್ರಾಧಿಕಾರ | ನಿರ್ದೇಶಕರು ಮತ್ತು ಡೀನ್ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ |
| 6 | ಇ.ಎಂ.ಡಿ. ಮೊತ್ತ. | ರೂ 25000/- |

ವಿ.ಸೂ.:- ಖರೀದಿದಾರರು ಅನುಪಯುಕ್ತ ವಸ್ತುಗಳ ಬಗ್ಗೆ ಮಾಹಿತಿ ಪಡೆಯಲು ಇಚ್ಛಿಸಿದ್ದಲ್ಲಿ ಕಛೇರಿ ವೇಳೆಯಲ್ಲಿಯೇ (ಪೂರ್ವಾಹ್ನ 9.00 ಗಂಟೆಯಿಂದ ಅಪರಾಹ್ನ 3.30 ಗಂಟೆವರೆಗೆ / ಸರ್ಕಾರಿ ರಜಾ ದಿನ ಹೊರತುಪಡಿಸಿ) ಸಹಾಯಕ ಆಡಳಿತಾಧಿಕಾರಿಗಳು / ಶುಶ್ರೂಷಕ ಅಧೀಕ್ಷಕರು ದರ್ಜೆ-1, ಭೋದಕ ಆಸ್ಪತ್ರೆ, ಮಡಿಕೇರಿ ರವರನ್ನು ಸಂಪರ್ಕಿಸಿ ಮಾಹಿತಿ ಪಡೆಯತಕ್ಕದ್ದು, ನಂತರ ದರವನ್ನು ನಮೂದಿಸುವುದು. ಬಿಡ್ ದರಗಳನ್ನು ಒಪ್ಪಿ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿರ್ದೇಶಕರು ಮತ್ತು ಡೀನ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥ, ಮಡಿಕೇರಿ, ಇವರಿಗೆ ಕಾಯ್ದಿರಿಸಲಾಗಿದೆ.

ನಿರ್ದೇಶಕರು ಮತ್ತು ಡೀನ್,
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಡಿಕೇರಿ.

ನಿರ್ದೇಶಕರು ಮತ್ತು ಡೀನ್
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಡಿಕೇರಿ - ೫೭೧೨೦೧

ಪ್ರತಿಯನ್ನು:-

1. ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ನಿರ್ದೇಶಕರು, ಆರೋಗ್ಯ ಮತ್ತು ಕಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ನಿರ್ದೇಶಕರು ಹಾಗು ಡೀನ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

**ಪ್ರತಿಯನ್ನು ಈ ಕೆಳಕಂಡವರಿಗೆ ಕಳುಹಿಸುತ್ತಾ, ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕ ಪ್ರಚಾರಕ್ಕಾಗಿ ಹಾಕಿಸುವ ವ್ಯವಸ್ಥೆ ಮಾಡಲು ಕೋರಲಾಗಿದೆ.**

1. ಜಿಲ್ಲಾ ಆರೋಗ್ಯ ಮತ್ತು ಕಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಕೊಡಗು ಜಿಲ್ಲೆ, ಮಡಿಕೇರಿ.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮಡಿಕೇರಿ.
3. ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.
4. ಸಹಾಯಕ ಆಡಳಿತಾಧಿಕಾರಿಗಳು, ಭೋದಕ ಆಸ್ಪತ್ರೆ, ಮಡಿಕೇರಿ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಶುಶ್ರೂಷಕ ಅಧೀಕ್ಷಕರು ದರ್ಜೆ-1, ಭೋದಕ ಆಸ್ಪತ್ರೆ, ಮಡಿಕೇರಿ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ವಿಷಯ ನಿರ್ವಾಹಕರು / ನಗದು ವಿಭಾಗ, ಬೋಧಕ ಆಸ್ಪತ್ರೆ, ಇವರಿಗೆ ಮುಂದಿನ ಕ್ರಮಕ್ಕಾಗಿ ನೀಡಲಾಗಿದೆ.
7. ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು.
8. ಕಛೇರಿ ಕಡತಕ್ಕೆ.